ಉಪಾಧ್ಯಕ್ಷರು ಈಗ ಸದನವನ್ನು ನಾಳೆ ಬೆಳಿಗ್ಗೆ 11 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು 7 ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 24ನೇ ಜುಲೈ 2007ರ ಬೆಳಿಗ್ಗೆ 11 00 ಗಂಟೆಗೆ ಸಮಾವೇಶಗೊಳ್ಳುವಂತೆ ನಿಶ್ಚಯಿಸಿತು

ಅನುಬಂಧ–I

7ಎ ಮೇರೆಗೆ ಬಂದಿರುವ ಅರ್ಜಿಗಳ ವಿಲೇವಾರಿಯನ್ನು ಭೂ ನ್ಯಾಯಮಂಡಳಿಗೆ ವಹಿಸುವುದು

787(946) ಶ್ರೀ ಗೋಪಾಲಕೃಷ್ಣ ಬಿ ಕೆ (ಸಾಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಭೂ ಸುಧಾರಣೆ ಕಾಯ್ದೆಯಡಿಯಲ್ಲಿ ನಮೂನೆ 7ಎ ಅರ್ಜಿಗಳ ವಿಲೇವಾರಿಯ ಅಧಿಕಾರವನ್ನು ಉಪ ವಿಭಾಗಾಧಿಕಾರಿಯವರಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದಾಗಿ 7ಎ ಮೇರೆಗೆ ಸಲ್ಲಿಸಿರುವ ಅರ್ಜಿಗಳ ವಿಲೇವಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, 7ಎ ಮೇರೆಗೆ ಸಲ್ಲಿಸಿರುವ ಅರ್ಜಿಗಳನ್ನು ಭೂ ನ್ಯಾಯ ಮಂಡಳಿಗೆ ವಹಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು

ಆ) ಇಲ್ಲ

ಇ) ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 77ರ ಪ್ರಕಾರ ಕಲಂ 45(3), 58, 60, 79ಎ ಮತ್ತು 79ಬಿ ಅಡಿ ಉಲ್ಲಂಘನೆಯಾದ ಜಮೀನುಗಳನ್ನು ಹೆಚ್ಚುವರಿ ಜಮೀನೆಂದು ವಿತರಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ ಕಲಂ 77ಕ್ಕೆ 1998ರಲ್ಲಿ ತಿದ್ದುಪಡಿ ತಂದು 77–ಎ, ಅಡಿಯಲ್ಲಿ ಸರ್ಕಾರಕ್ಕೆ ನಿಹಿತವಾದ ಜಮೀನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಫಾರಂ 7ಎ ಅರ್ಜಿಗಳನ್ನು ಭೂ ನ್ಯಾಯ ಮಂಡಳಿಗಳಿಗೆ ನೀಡುವುದರಿಂದ ಅರ್ಜಿಗಳು ಇತ್ಯರ್ಥವಾಗುವಲ್ಲಿ ವಿಳಂಬವಾಗುತ್ತದೆ ಈಗಾಗಲೇ ಭೂ ನ್ಯಾಯ ಮಂಡಳಿಗಳಿಗೆ ನೀಡುವುದರಿಂದ ಅರ್ಜಿಗಳು ಇತ್ಯರ್ಥವಾಗುವಲ್ಲಿ ವಿಳಂಬವಾಗುತ್ತದೆ ಈಗಾಗಲೇ ಭೂ ನ್ಯಾಯ ಮಂಡಳಿ ಮುಂದೆ ಉಚ್ಚ ನ್ಯಾಯಾಲಯದಿಂದ ರಿಮ್ಯಾಂಡ್ ಆಗಿ ಬಂದಿರುವ ಪ್ರಕರಣಗಳು ಬಾಕಿ ಇರುತ್ತವೆ ಭೂ ನ್ಯಾಯ ಮಂಡಳಿಯಲ್ಲಿ ಸರ್ಕಾರಿ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರು ಇರಬೇಕಿದ್ದು ಸಭೆ ನಡೆಸಲು ಕೋರಂ

ಇರಬೇಕಾಗುತ್ತದೆ ಕೋರಂ ಇಲ್ಲದಿದ್ದಲ್ಲಿ ಭೂ ನ್ಯಾಯ ಮಂಡಳಿಯಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ ಆದುದರಿಂದ ಚಾಲ್ತಿಯಲ್ಲಿರುವಂತೆ ನಮೂನೆ 7ಎ ಅರ್ಜಿಗಳನ್ನು ಇತ್ಯರ್ಥಪಡಿಸುವ ಅಧಿಕಾರ ಉಪ ವಿಭಾಗಾಧಿಕಾರಿಗಳವರ ಮಟ್ಟದ ಅಧಿಕಾರಿಯವರಿಗೆ ನೀಡಿರುವುದು ಸೂಕ್ತವಾಗಿರುತ್ತದೆ

ಈ) ಪ್ರಶ್ನೆ "ಇ" ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

788(1370) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಪ್ರಾದೇಶಿಕ ಅರಣ್ಯ ವಲಯಗಳು ಯಾವುವು,

ಆ) ಇಲ್ಲಿ ಕೆಲಸ ಮಾಡುತ್ತಿರುವ ವಲಯ ಅರಣ್ಯಾಧಿಕಾರಿಗಳ ಹೆಸರು ಮತ್ತು ವಿವರಗಳೇನು, ಇವರುಗಳು ಎಷ್ಟು ವರ್ಷಗಳಿಂದ ಇದೇ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಇವರುಗಳ ಪೈಕಿ ಯಾವ ಯಾವ ಅಧಿಕಾರಿಗಳ ಮೇಲೆ ಸಾರ್ವಜನಿಕ ದೂರುಗಳು, ಇಲಾಖಾ ವಿಚಾರಣೆಗಳು ಮತ್ತು ಮರಗಳ ಅಕ್ರಮ ಕಡತಲೆಯ ಬಗ್ಗೆ ದೂರುಗಳಿವೆ,

ಇ) ಇವರುಗಳ ಪೈಕಿ ಲೋಂಡಾ ವಲಯದಲ್ಲಿರುವ ವಲಯ ಅರಣ್ಯಾಧಿಕಾರಿಗಳ ವಿರುದ್ಧ ಸ್ಥಳೀಯ ಜನ ಪ್ರತಿನಿಧಿಗಳು ಅವ್ಯವಹಾರ, ಬೆಲೆಬಾಳುವ ಮರಗಳ ಅಕ್ರಮ ಕಡಿತಲೆ ಮತ್ತು ಸಾಗಾಟದ ಬಗ್ಗೆ ಇಲಾಖೆಗೆ ದೂರುಗಳನ್ನು ಸಲ್ಲಿಸಿರುವುದು ನಿಜವಲ್ಲವೇ,

ಈ) ಹಾಗಿದ್ದಲ್ಲಿ, ಈ ದೂರುಗಳ ಆಧಾರದ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ,

ಉ) ಗುರುತರವಾದ ಆಪಾದನೆಗಳನ್ನು ಎದುರಿಸುತ್ತಿದ್ದರೂ ಸಹ ಇವರುಗಳನ್ನು ಇದೇ ಸ್ಥಳದಲ್ಲಿ ಮುಂದುವರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಊ) ಹಾಗಿದ್ದಲ್ಲಿ, ಆಡಳಿತ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಹಲವಾರು ವರ್ಷಗಳಿಂದ ಲೋಂಡಾ ವಲಯ ಹಾಗೂ ಬೆಳಗಾವಿ ಜಿಲ್ಲೆಯ ವಿವಿಧ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರುಗಳನ್ನು ಜಿಲ್ಲೆಯಿಂದ ಹೊರಗಡೆಗೆ ವರ್ಗಾವಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ ಚೆನ್ನಿಗಪ್ಪ (ಅರಣ್ಯ, ಪರಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಪ್ರಾದೇಶಿಕ ಅರಣ್ಯ ವಲಯಗಳ ವಿವರ ಈ ಕೆಳಕಂಡಂತಿದೆ